# ಸರಕಾರಿ ಉರ್ದು ಪ್ರೌಢ ಶಾಲೆ(RMSA) ಅಣ್ಣಿಗೇರಿ

## ಮಾದರಿ ಪ್ರಶ್ನೆಪತ್ರಿಕೆ–03

**ತರಗತಿ : 10ನೇ** | **ವಿಷಯ : ದ್ವಿತೀಯ ಭಾಷೆ ಕನ್ನಡ**

**ಅಂಕಗಳು : 80** | **ಸಮಯ : 3 ಗಂಟೆ**

---

**I ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿ.** **(1X4=4)**

1 ಅತ್ಯಂತ ಪದವು ಈ ಸಂಧಿಗೆ ಉದಾಹರಣೆ:
ಎ) ಲೋಪಸಂಧಿ ಬಿ) ಯಣ್ ಸಂಧಿ ಸಿ) ಆದೇಶ ಸಂಧಿ ಡಿ) ಗುಣ ಸಂಧಿ

2 ಜನ್ಮ ಪದದ ತದ್ಭವ ರೂಪ:
ಎ)ಜಮಾನೆ ಬಿ)ಜಮುನಾ ಸಿ)ಜನುಮ ಡಿ)ಜನಮ

3 ರಹೀಮನು ಊರನ್ನು ಸೇರಿದನು ಈ ವಾಕ್ಯದಲ್ಲಿ ದ್ವಿತೀಯಾ ವಿಭಕ್ತಿಯನ್ನು ಹೊಂದಿರುವ ಪದ:
ಎ)ಸೇರಿದನು ಬಿ)ಊರನ್ನು ಸಿ)ರಹೀಮ ಡಿ)ಯಾವುದೂ ಅಲ್ಲಾ

4 ತುದಿಮೂಗು ಪದವು ಈ ಸಮಾಸಕ್ಕೆ ಉದಾಹರಣೆ
ಎ)ಕ್ರಿಯಾ ಸಮಾಸ ಬಿ)ದ್ವಿಗು ಸಮಾಸ ಸಿ)ದ್ವಂದ್ವ ಸಮಾಸ ಡಿ)ಅಂಶಿ ಸಮಾಸ

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ** **(1X12=12)**

5 ಅನುಭವ ಮಂಟಪದ ರುವಾರಿಗಳು ಯಾರು?

6 ಸಿದ್ಧಾರ್ಥ ಯಾರ ಹಾಗೂ ಯಾವುದರ ಮೋಹವನ್ನು ತೊರೆದನು?

7 ಬಡ ಹೆಂಗಸು ಜೀವನೋಪಾಯಕ್ಕಾಗಿ ಏನು ಮಾಡುತ್ತಿದ್ದಳು?

8 ಬಸವಣ್ಣನವರು ಜನರ ಯಾವ ಧಾರ್ಮಿಕ ನಂಬಿಕೆಗಳನ್ನು ಖಂಡಿಸಿದ್ದಾರೆ?

9 ಬೇಟೆಗಾರನ ಕಣ್ಣಿಗೆ ಬಿದ್ದ ಪ್ರಾಣಿ ಯಾವುದು?

10 ಹಕ್ಕಿಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ?

11 ಗುರುರಾಜ ಕರ್ಜಗಿಯವರ ಅಂಕಣ ಬರಹದ ಶಿರ್ಷಿಕೆ ಯಾವುದು?

12 ಈ ನಾಡಿನ ಬೆನ್ನೆಲುಬು ಯಾರು?

13 ಲಂಡನ್‌ನಲ್ಲಿ ಅಗ್ನಿದುರಂತ ಯಾವಾಗ ಸಂಭವಿಸಿತು?

14.ಸಿಪಿಕೆಯವರ ಸದ್ದು ಮಾಡದಿರು ಕವಿತೆಯ ಆಕರ ಕೃತಿ ಯಾವುದು?

15 ಜಗವು ಯಾವಾಗ ಹೊಸ ಕಳೆಯನ್ನು ತುಂಬಿಕೊಳ್ಳುತ್ತದೆ?

16 ಕವಯತ್ರಿ ತ್ರಿಶಂಕುಗಳು ಎಂದು ಯಾರನ್ನು ಕರೆದಿದ್ದಾರೆ?

SHARANUSH

**III ಈ ಕೆಳಗಿನ ಪ್ರಶ್ನೆಗಳಿಗೆ 3 ಅಥವಾ 4 ವಾಕ್ಯಗಳಲ್ಲಿ ಉತ್ತರಿಸಿ. (8X2=16)**

17 ನೀಲಿ ಸಾಮ್ರಾಟ ಹಾಗೂ ಸಗ್ಗದಕ್ಕಿ ಗೂಡುಗಳ ವಿಶೇಷತೆಗಳೇನು?

18 ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ಏನಾಗಬಹುದು?

19 ಏಣಿ ಹೇಳಿಕೊಳ್ಳುವ ಕಷ್ಟಗಳೇನು?

20 ಹಕ್ಕಿಗಳು ಗೂಡಗಳನ್ನು ಯಾವ ರೀತಿಯಲ್ಲಿ ಅಲಂಕರಿಸುತ್ತವೆ?

21 ಚೈತ್ರದಲ್ಲಿ ಹಕ್ಕಿಗಳ ಕಲರವ ಹೇಗಿರುತ್ತದೆ ಎಂದು ಕವಿ ವರ್ಣಿಸುತ್ತಾನೆ?

22 ಬನದ ಗೋಪಾಲನ ಜೊತೆ ಗೋಪಾಲನು ಏನು ಕೇಳಿಕೊಂಡನು?

23 ಕಳ್ಳರ ಗುರುವಿನ ಮನಃಪರಿವರ್ತನೆ ಹೇಗಾಯಿತು?

24 ಮನುಕುಲದ ಭವ್ಯ ಬದುಕು ಯಾವ ರೀತಿ ಅರಳಬೇಕಾಗಿದೆ?

**IV ಈ ಕೆಳಗಿನ ಸಾಹಿತಿಯ ಜನನ,ಸ್ಥಳ,ಕಾಲ,ಕೃತಿ,ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. (1X3=3)**

25 ಬಸವರಾಜ ಸಬರದ

**V ಈ ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ (1X3=3)**

26 ಹಸಿಸೌದೆ ಬುಸುಗುಟ್ಟಿ ದನಿಯನೆತ್ತುವುದೆಲ್ತೆ
ಕಿಡಿ ಸೋಕೆ ಮದ್ದು ಸಿಡಿದಬ್ಬರಿಪುದು
ಅಂತಿರದೆ ರವಿಕರಕೆ ಕರಗುವಿಬ್ಬನಿವೊಲಿರು;
ಸಿಡುಕು ಮಿಡುಕನು ತೊರೆದು ಮೌನಿಯಾಗು

**VI ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಸಮನ್ವಯಗೊಳಿಸಿ ಬರೆಯಿರಿ (1X3=3)**

27 ಸೇನಾಸಾಗರ

**VII ಗಾದೆ ವಿಸ್ತರಿಸಿ ಬರೆಯಿರಿ. (1X3=3)**

28 ಹಕ್ಕಿಗಳಿಗೆ ಗೂಡು ಮಕ್ಕಳಿಗೆ ತಾಯಿ

**ಅಥವಾ**

ಪೆನ್ನು ಖಡ್ಗಕ್ಕಿಂತ ಹರಿತವಾದುದು

**VIII ಈ ಕೆಳಗಿನ ವಾಕ್ಯಗಳಿಗೆ ಸಂದರ್ಭವನ್ನು ಸ್ವಾರಸ್ಯದೊಂದಿಗೆ ವಿವರಿಸಿ. (5X3=15)**

29 ಹದಿಮೂರು ಸಾವಿರ ಜನ ಸತ್ತು ಹೋದರಂತೆ

30 ನಾನು ಎಲ್ಲೋ ಹೋಗಿ ಆಹಾರವನ್ನು ಸಂಪಾದಿಸಿಕೊಂಡು ಬರುತ್ತೇನೆ

31 ಒಂದು ಜೀವನಕೇಕೆ ಹಲವು ಸಾಧ್ಯಗಳು

32 ಏನು ಮಡುತ್ತಾರೆ ಈ ಶಿಖಂಡಿಗಳು

33 ಗುಬ್ಬಿ ಸಾರಾಂಗ ನಗುತಾವೆ

SHARANUSH

**IX ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **(1X4=4)**

34 ಕಡೆಗೆ ಹಾಯವು......................................

...........................................................................

........................................................................

.......................................ಬಲಕೆ ನಮೊಯೆಂದ

**ಅಥವಾ**

ಎಂದೊಡರ್ಜುನ ನಗುತ.................................

.........................................................................

.....................................................................

............................................ಬಿಟ್ಟಮಂಡೆಯಲಿ

**X ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **(1X4=4)**

35 ಬಾಲಕ ಪುಟ್ಟಯ್ಯ ಹಾರ್ಮೋನಿಯಂ ನುಡಿಸಿದ ಪ್ರಸಂಗ ವಿವರಿಸಿ

**ಅಥವಾ**

ವಿಶೇಷ ಚೇತನರ ವಿಷಯದಲ್ಲಿ ನಮ್ಮ ಹೊಣೆಗಾರಿಕೆಗಳೇನು?

**XI ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**(2 X2=4)**

**36** ಮನುಷ್ಯ ಪರಿಸರದ ಕೂಸು ಎಂಬುದು ಪ್ರಸಿದ್ಧವಾದ ಮಾತು.ಪರಿಸರ ಎಂಬುದು ಮನುಷ್ಯನಿಗೆ ಮಾತ್ರವಲ್ಲ ಪ್ರತಿಯೊಂದು ಜೀವಿಗೂ ತಾಯಿಯ ಸಮಾನ.ಆದರೆ ಇಂದು ಮಾನವ ಪರಿಸರದ ಮೇಲೆ ಬಲತ್ಕಾರ ಮಾಡುತ್ತಿದ್ದಾನೆ.ಇದರಿಂದ ಪರಿಸರ ನಾಶವಾಗುತ್ತಿದೆ.ಮಾನವನು ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ವಿವಿಧ ರೀತಿಯಲ್ಲಿ ಹಾಳು ಮಾಡುತ್ತಿದ್ದಾನೆ.ಇದಕ್ಕೆ ಪ್ರತಿಯಾಗಿ ಪ್ರಕೃತಿಯು ನೆರೆ ಹಾವಳಿ ಭೂಕಂಪ,ಅತಿವೃಷ್ಠಿ,ಅನಾವೃಷ್ಠಿ,ಚಂಡಮಾರುತ,ಸಾಂಕ್ರಾಮಿಕ ರೋಗಗಳ ಮೂಲಕ ಪ್ರತಿಭಟನೆಯನ್ನು ನಡೆಸಿದೆ.ಇದನ್ನು ಅರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯವಾಗಿದೆ.ಪರಿಸರ ಮಾಲಿನ್ಯಕ್ಕೆ ಅತಿಕ್ರಮಣ ಸಾಗುವಳಿ, ಅರಣ್ಯನಾಶ, ರಾಸಾಯನಿಕ ಗೊಬ್ಬರಗಳ ಬಳಕೆ, ಗಣಿಗಾರಿಕೆ ಮುಂತಾದವು ಕಾರಣಗಳಾಗಿವೆ.ದಿನದಿಂದ ದಿನಕ್ಕೆ ಅಂತರ್ಜಲದ ಮಟ್ಟ ಕುಸಿಯುತ್ತಿದೆ.ಎಷ್ಟೋ ಜೀವಸಂಕುಲಗಳು ಅಳಿವಿನಂಚಿನಲ್ಲಿವೆ.ಪರಿಸರದಲ್ಲಿ ಒಂದು ಅಂಶವು ಅಳಿದು ಹೋದರೆ ಸಮತೋಲನ ತಪ್ಪುತ್ತದೆ.ಪರಿಸರ ದಿನದಿಂದ ದಿನಕ್ಕೆ ನಾಶವಾಗುತ್ತಾ ಸಾಗಿದರೆ ನಮ್ಮ ಮುಂದಿನ ಪೀಳಿಗೆಗೆ ಶುದ್ಧ ನೀರು ಗಾಳಿ ಆಹಾರ ಸಿಗದೇ ಹೋಗಬಹುದು.ಆದ್ದರಿಂದ ಇದನ್ನರಿತು ಪರಿಸರ ಸಂರಕ್ಷಣೆ ಮಡುವುದು ಇಂದಿನ ಅಗತ್ಯವಾಗಿದೆ.

**ಪ್ರಶ್ನೆಗಳು**

ಅ) ಪರಿಸರ ಸಂರಕ್ಷಣೆ ಇಂದಿನ ಅಗತ್ಯ ಏಕೆ?

ಆ) ಮಾನವ ಪರಿಸರದ ಮೇಲೆ ಬಲತ್ಕಾರ ಮಾಡುತ್ತಿರುವುದರಿಂದ ಪರಿಣಾಮವೇನು?

SHARANUSH

**XII ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ವಿಷಯಕ್ಕೆ ಪ್ರಬಂಧವನ್ನು ಬರೆಯಿರಿ. (1X4=4)**

37 ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳು

**ಅಥವಾ**

ರಾಷ್ಟ್ರೀಯ ಹಬ್ಬಗಳ ಮಹತ್ವ

**XIII ಈ ಕೆಳಗಿನ ಯವೂದಾದರೂ ಒಂದು ಪತ್ರವನ್ನು ಬರೆಯಿರಿ (1X5=5)**

38 ನಿಮ್ಮನ್ನು ಮೈಸೂರಿನ ಕುವೆಂಪು ನಗರದ ಸರಕಾರಿ ಪ್ರೌಢ ಶಾಲೆಯ ಅನಿಕೇತ/ಶ್ರಾವ್ಯಾ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯ ಶಾಲಾ ಶೈಕ್ಷಣಿಕ ಪ್ರವಾಸಕ್ಕೆ ಹಣ ಕಳುಹಿಸುವಂತೆ ತಂದೆಗೆ ಪತ್ರ ಬರೆಯಿರಿ

**ಅಥವಾ**

ನಿಮ್ಮನ್ನು ಕಲಬುರುಗಿಯ ಸರಕಾರಿ ಉರ್ದು ಪ್ರೌಢ ಶಾಲೆಯ ರಫೀಕ್/ಮುಸ್ಕಾನ್ ಎಂದು ಭಾವಿಸಿಕೊಂಡು ಆರೋಗ್ಯ ತಪಾಸಣೆಗಾಗಿ ಎರಡು ದಿನಗಳ ರಜೆ ಕೊಡುವಂತೆ ವಿನಂತಿಸಿ ಮುಖ್ಯೋಪಧ್ಯಾಯರಿಗೊಂದು ಮನವಿ ಪತ್ರ ಬರೆಯಿರಿ

***********

SHARANU SH